ಅಸಲು ದಾವೆ ನಂಃ 258/2020 ಡಿ.ಡಬ್ಲ್ಯೂಃ 3 ಸಣ್ಣದ್ಯಾಮಣ್ಣ ಮಡಿವಾಳರ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 16/02/2024 ರಂದು ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ **CYH** ವಕೀಲರಿಂದಃ

1. ನಾನು ಹೊಲ ಮನೆ ಕೆಲಸ ಮಾಡುತ್ತೇನೆ. ನಾನು ಈ ಹಿಂದೆ ಕೆ.ಎಸ್. ಆರ್.ಟಿ.ಸಿ.ಯಲ್ಲಿ ಕಂಡೆಕ್ಟರ್ ಆಗಿದ್ದೆ. ನಂತರ ಕಂಟ್ರೋಲ್ ರ ಆಗಿ ನಿವೃತ್ತಿ ಹೊಂದಿದೆ. ಚನ್ನಬಸಪ್ಪ ಹೂವಿನಹಡಗಲಿ ಮತ್ತು ನಾನು ಬದಾಮಿಯಲ್ಲಿ ನೌಕರಿ ಮಾಡುತ್ತೇನೆ. ನಾನು ಕುಸ್ತಿ ಪೈಲ್ವಾನ್ ಆಗಿದ್ದೆ ಎಂದರೆ ನಿಜ. ನಾನು ಮತ್ತು ಕಲ್ಲಪ್ಪ ಮತ್ತು ಚನ್ನಬಸಪ್ಪ ಕುಸ್ತಿ ಪೈಲ್ವಾನ್‌ರು ಎಂದರೆ ನಿಜ. ನಾವು ಬೆಂಗಳೂರು, ಮೈಸೂರು ಪಂಥ್ಯಗಳಲ್ಲಿ ಆಡಿದ್ದೇವೆ. ಗೌಡಣ್ಣವರ ಮತ್ತು ಮುಕ್ಕಣವರ ಇವರಿಗೆ 1 ಎಕರೇ 31 ಗುಂಟೆ ಜಮೀನು ಮತ್ತು ಎರಡು ಮನೆಗಳು ಇದ್ದವು. ಹನಮವ್ವ ಮುಕ್ಕಣ್ಣವರ ಕಲ್ಲಪ್ಪ ಮರಿಬಸಪ್ಪನವರ ಅಕ್ಕ. ಕಲ್ಲಪ್ಪ ಮರಿಬಸಪ್ಪನವರ ಕುಟುಂಬಕ್ಕೆ ಸರ್ವೇ ನಂಬರ 3/3 ಕ್ಷೇತ್ರ 1 ಎಕರೆ 31 ಗುಂಟೆ ಹೊಲ ಮತ್ತು ಎರಡು ಮನೆಗಳು ಇದ್ದವು. ಮನೆ ನಂಬರ ಗೊೖತ್ತಿಲ್ಲ. ಬಸವ್ವನಿಗೆ ಮನೆ ಹಂಚಿಕೆಯಾಗಿರಲಿಲ್ಲ. ಪಾಲುವಾಟ್ನಿಯಾಗಿಲ್ಲ ಎಂದು ನನಗೆ ವೈಯಕ್ತಿಕವಾಗಿ ದಾಖಲೆಗಳನ್ನು ನೋಡಿ ಹೇಳಿದ್ದೇನೆ. ನಾನು ಕಲ್ಲಪ್ಪ ಇವರ ಮಾತು ಕೇಳಿ ವಾಟ್ನಿಯಾಗಿಲ್ಲ ಎಂದು ಹೇಳುತ್ತಿದ್ೇನೆ ಎಂದರೆ ಸರಿಯಲ್ಲ. ಮೂಲ ಪುರುಷ ಬಾಳಪ್ಪ ಮಗ ಬಸಪ್ಪ ಯಾವಾಗ ತೀರಿಕೂಂಡ ನನಗೆ ಗೊತ್ತಿಲ್ಲ. ಆತ ಲಗ್ನವಾಗದೆ ತೀರಿಕೊಂಡ. ಬಸಪ್ಪ ತೀರಿಕೊಂಡ ನಂತರ ಅಂದಪ್ಪ ಗೌಡಣ್ಣವರ ತನ್ನ ಹೆಸರಿಗೆ ಹೊಲವನ್ನು 8 ವರ್ಷಗಳ ಹಿಂದೆ ಹಚ್ಚಿಕೂಂಡ ಮತ್ತು ಅದರ ಡ ನಂಬರ ಗೊತ್ತಿಲ್ಲ. 1 ರಿಂದ 7 ನೇ ವಾದಿಯರ ತಾಯಿ ಬಸವ್ವ ತೀರಿಕೂಂಡ ತಾರೀಕು ಗೊತ್ತಿಲ್ಲ. ಎರಡು ಮನೆಗಳು ಇದ್ದವು, ಅದರಲ್ಲಿ ಒಂದು ಮನೆ ಮಾರಿದ್ದಾರೆ ಎಂದರೆ ನಿಜ. ಮಲ್ಲಪ್ಪ ಮರಿಬಸಪ್ಪನವರ ಮನೆಯನ್ನು ಕೆಂಪಸಂಗಣ್ಣ ಇವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ಕಲ್ಲಪ್ಪ ಮರಿಬಸಪ್ಪವರು ಮತ್ತು ಗೌಡಣ್ಣವರ ಸೇರಿ ಮಾರಾಟ ಮಾಡಿದ್ದಾರೆ. ಮಾರಾಟ ಮಾಡಿದ ದಿನಾಂಕ ಗೊತ್ತಿಲ್ಲ. ಖರೀದಿ ಪತ್ರವನ್ನು ನೋಡಿಲ್ಲ. 2018 ರಲ್ಲಿ ದಾವಾ ಆಸ್ತಿ 1 ಎಕರೆ 31 ಗುಂಟೆಯನ್ನು ಬಸಪ್ಪ ಗೌಡಣ್ಣವರ ಇವರು ಅಶೋಕ ಡಂಬಳ ಇವರಿಗೆ ಮಾರಾಟ ಮಾಡಿದ್ದರು ಎಂದರೆ ನಿಜ. ಮಾರಾಟವಾದ ನಂತರ ಗೌಡಣ್ಣ ಇವರಿಗೂ ಮತ್ತು ಮುಕ್ಕಣ್ಣ ಇವರಿಗೆ ಜಗಳ ಶುರುವಾಯಿತು ಎಂದರೆ ನಿಜ. ಅದಕ್ಕಿಂತ ಮುಂಚೆ ಜಗಳವಿರಲಿಲ್ಲ ಎಂದರೆ ನಿಜ. ಅವರು ಅವರ ಪಾಲಿಂದು ಅವರು ಉಣ್ಣುತ್ತಿದ್ದರು ಮತ್ತು ಇವರ ಪಾಲಿಂದು ಇವರು ಉಣ್ಣುತ್ತಿದ್ದರು ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು 31 ಗುಂಟೆ ಗೌಡಣ್ಣವರ ಮತ್ತು 1 ಎಕರೆ ಮರಬಸಪ್ಪವರು ಉಣ್ಣುತ್ತಿದ್ದರು ಎಂದು ಹೇಳುತ್ತಾರೆ. ಕಲ್ಲಪ್ಪ ಮರಿಬಸಪ್ಪನವರು ಗೌಡಣ್ಣನವರು

ಇವರಿಗೆ ಯಾವಾಗ ಆಸ್ತಿ ಕೇಳಿದರು ಎಂದು ನನಗೆ ದಿನಾಂಕ ನೆನಪಿಲ್ಲ. ಆ ರೀತಿ ನಾನು ಪ್ರಮಾಣ ಪತ್ರದಲ್ಲಿ ಬರೆಸಿಲ್ಲ. ಮುಕ್ಕಣ್ಣವರು ಮತ್ತು ಗೌಡಣ್ಣನವರು ಇವರ ಮಧ್ಯ ಇದ್ದ



ಆರ್.ಟಿ.ಎಸ್. ಕೇಸ್ ನಂಬರ ಗೊತ್ತಿಲ್ಲ. ಸದರಿ ಕೇಸ್ ಕಲ್ಲಪ್ಪನ ಪರವಾಗಿ ತೀರ್ಪು ಮಾಡಿದರು. ಕಲ್ಲಪ್ಪ ಮರಿಬಸಪ್ಪವರು ಮತ್ತು ಗೌಡಣ್ಣವರ ಇವರ ಬಗ್ಗೆ ಮತ್ತು ಇವರ ಜಮೀನುಗಳ ಬಗ್ಗೆ ಯಾವುದೇ ಮಾಹಿತಿ ಇರದೇ ಇದ್ದರೂ ಸಹ ನಾನು ಕಲ್ಲಪ್ಪನ ಮಾತುಕೇಳಿ ಸುಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ನನಗೆ ಜಕ್ಕಲಿ ಗ್ರಾಮದಲ್ಲಿ ಜಮೀನು ಇವೆ. ನಮ್ಮ ಹೆಸರಿನಲ್ಲಿ 13 ಕೂರಗಿ ಜಮೀನು ಇವೆ. ಕಲ್ಲಪ್ಪ ನಮ್ಮ ಜಮೀನಿಗೆ ಕೆಲಸಕ್ಕೆ ಬರುತ್ತಾರೆ ಎಂದರೆ ಸರಿಯಲ್ಲ. ನನ್ನ ಮಗನ ಹೆಸರು ಪ್ರಕಾಶ. ನನ್ನ ಮಗ ಕ್ರಿಮಿನಲ್ ಕೇಸ್ ನಲ್ಲಿ ಆರೋಪಿ ಇದ್ದ ಎಂದರೆ ನಿಜ. ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನೇ ಕೊಟ್ಟಿದ್ದೇನೆ. ಕಲ್ಲಪ್ಪ ಮರಿಬಸಪ್ಪನವರು ನನ್ನ ಸ್ನೇಹಿತ ಆಗಿದ್ದರಿಂದ ಆತನ ಮಾತುಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಪ್ರಮಾಣ ಪತ್ರದಲ್ಲಿ ಕಾಣಿಸಿದ ಎಲ್ಲಾ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**
ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ
ನ್ಯಾಯಾಧೀಶರು ರೋಣ.

ಅಸಲು ದಾವೆ ನಂಃ 258/2020 ಡಿ.ಡಬ್ಲ್ಯೂಃ 2 ಚನ್ನಬಸಪ್ಪ ಸೂಡಿ

ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 16/02/2024 ರಂದು ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ **CYH** ವಕೀಲರಿಂದಃ

1. ಈ ಕೇಸ್ ನ ವಾದಿ ಮತ್ತು ಪ್ರತಿವಾದಿಯರು ಎಂದು ನನಗೆ ನಿಖರವಾಗಿ ಗೊತ್ತಿಲ್ಲ. OS 258/2020 ಕೇಸ್ ನಲ್ಲಿ ವಾದಿ ಮತ್ತು ಪ್ರತಿವಾದಿಯರು ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ಹನಮವ್ವ ಬಸಪ್ಪ ಮುಕ್ಕಣ್ಣವರ ಇವರಿಗೆ ಸಂಬಂಧಪಟ್ಟ ಆಸ್ತಿಗಳ ಬಗ್ಗೆ ಗೊತ್ತಿದೆ. 1 ಎಕರೆ 31 ಗುಂಟೆ ಹೊಲ ಅದರ ಸರ್ವೇ ನಂಬರ ನೆನಪಿಲ್ಲ. ಎರಡು ಮನೆಗಳು ಇದ್ದವು, ಅದರಲ್ಲಿ ಒಂದು ಮನೆ ಮಾರಿ, ಅದರ ಹಣದಿಂದ ಇನ್ನೊಂದು ಮನೆ ಕಟ್ಟಿಸಿದ್ದಾರೆ. ಮಾರಾಟ ಮಾಡಿದ ಮತ್ತು ಕಟ್ಟಿಸಿದ ಮನೆ ನಂಬರ ಗೊತ್ತಿಲ್ಲ. ಸದರಿ ಮನೆಯನ್ನು ಅಂದಪ್ಪ ಗೌಡಣ್ಣವರ ಮತ್ತು ಮಲ್ಲಪ್ಪ ಮರಿಬಸಪ್ಪನವರ ಕೂಡಿ ಮನೆಯನ್ನು ಕೆಂಪಸಂಗಣ್ಣ ಇವರಿಗೆ ಮಾರಾಟ ಮಾಡಿದ್ದಾರೆ. ಯಾವ ಇಸವಿಯಲ್ಲಿ ಮಾರಾಟ ಮಾಡಿದ್ದಾರೆ ನೆನಪಿಲ್ಲ. ಖರೀದಿ ಪತ್ರವನ್ನು ನೋಡಿಲ್ಲ. ಸದರಿ ಖರೀದಿ ವ್ಯವಹಾರದಲ್ಲಿ ನಾನು ಭಾಗವಹಿಸಿಲ್ಲ. ಮಾರಾಟ ಮಾಡಿದ ನಂಬರ ವಿ.ಪಿ.ಸಿ. 646 ಎಂದರೆ ನನಗೆ ಗೊತ್ತಿಲ್ಲ. ವಿ.ಪಿ.ಸಿ. 646 ನ್ನು ನಿಂಗಪ್ಪ ಕೆಂಪಣ್ಣವರ ಇವರಿಗೆ ಮಲ್ಲಪ್ಪ ಮರಿಬಸಪ್ಪನವರ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಅಂದಪ್ಪ ಗೌಡಣ್ಣವರ ಮಾರಾಟ ಮಾಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೂಲ ಪುರುಷ ಬಾಳಪ್ಪ ಮಗ ಬಸಪ್ಪ ಯಾವಾಗ ತೀರಿಕೂಂಡ ನನಗೆ ಗೊತ್ತಿಲ್ಲ. ಬಸಪ್ಪ ತೀರಿಕೊಂಡ ನಂತರ ಅಂದಪ್ಪ ಗೌಡಣ್ಣವರ ತನ್ನ ಹೆಸರಿಗೆ ಹೊಲವನ್ನು ಯಾವಾಗ ಹಚ್ಚಿಕೂಂಡ ಮತ್ತು ಅದರ ಡ ನಂಬರ ಗೊತ್ತಿಲ್ಲ. 1 ರಿಂದ 7 ನೇ ವಾದಿಯರ ತಾಯಿ ಬಸವ್ವ ತೀರಿಕೂಂಡ ತಾರೀಕು ಗೊತ್ತಿಲ್ಲ. ಬಸಪ್ಪ ಮತ್ತು ಬಸವ್ವ ಮಧ್ಯ ಆದಂತಹ ಮೌಖಿಕ ವಾಟ್ನಿ ಬಗ್ಗೆ ನನಗೆ ಮಾಹಿತಿ ಇಲ್ಲ. ಯಾವ ಯಾವ ಆಸ್ತಿಗಳು ಹಂಚಿಕೆಯಾಗಿವೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಆಸ್ತಿ ಹಂಚಿಕೆಯಾಗಿಲ್ಲ ಮಲ್ಲಪ್ಪ ಮರಿಬಸಪ್ಪನವರ 1 ಎಕರೆ ಊಣ್ಣುತ್ತಿದ್ದರು, ಮತ್ತು ಬಸಪ್ಪ ಗೌಡಣ್ಣವರ 31 ಗುಂಟೆ ಉಣ್ಣುತ್ತಿದ್ದರು ಎಂದು ಹೇಳುತ್ತಾರೆ. ನಾವು ಊರಿನಲ್ಲಿ ಇರುವುದರಿಂದ ರೀತಿ ಊಣ್ಣುತ್ತಿದ್ದರು ಎಂದು ಹೇಳುತ್ತೇನೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2018 ರಲ್ಲಿ ದಾವಾ ಆಸ್ತಿ 1 ಎಕರೆ 31 ಗುಂಟೆಯನ್ನು ಬಸಪ್ಪ ಗೌಡಣ್ಣವರ ಇವರು ಅಶೋಕ ಡಂಬಳ ಇವರಿಗೆ ಮಾರಾಟ ಮಾಡಿದ್ದರು ಎಂದರೆ ನಿಜ. ಮಾರಾಟವಾದ ನಂತರ ಗೌಡಣ್ಣ ಇವರಿಗೂ ಮತ್ತು ಮುಕ್ಕಣ್ಣ ಇವರಿಗೆ ಜಗಳ ಶುರುವಾಯಿತು ಎಂದರೆ ನಿಜ. ಅದಕ್ಕಿಂತ ಮುಂಚೆ ಜಗಳವಿರಲಿಲ್ಲ. ಅವರು ಅವರ ಪಾಲಿಂದು ಅವರು ಉಣ್ಣುತ್ತಿದ್ದರು ಮತ್ತು ಇವರ ಪಾಲಿಂದು ಇವರು ಉಣ್ಣುತ್ತಿದ್ದರು ಎಂದು ಹೇಳುತ್ತಾರೆ.

ಮುಕ್ಕಣ್ಣವರು ಗೌಡಣ್ಣನವರು ಇವರಿಗೆ ಯಾ ವಾಗ ಆಸ್ತಿ ಕೇಳಿದರು ಎಂದು ನನಗೆ ದಿನಾಂಕ ನೆನಪಿಲ್ಲ. ಸದರಿ ಆಸ್ತಿ MR No ನನಗೆ ಗೊತ್ತಿಲ್ಲ.  ಮುಕ್ಕಣ್ಣವರು

-2-

ಮತ್ತು ಗೌಡಣ್ಣನವರು ಇವರ ಮಧ್ಯ ಆರ್.ಟಿ.ಎಸ್. ಕೇಸ್ ನಂಬರ ಗೊತ್ತಿಲ್ಲ.  ಜಗಳವಾಗುವ ಮುಂಚೆ ಗೌಡಣ್ಣನವರು  1 ಎಕರೆ 31 ಗುಂಟೆ ಬಿತ್ತುತ್ತಿದ್ದರು ಎಂದರೆ ಸರಿಯಲ್ಲ. ಆ  ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ನಮ್ಮಗೆ ನಾಲ್ಕು ಎಕರೆ ಹೊಲ ಇದೆ. ಸರ್ವೇ ನಂಬರ 201 ಇರಬಹುದು. ನಮ್ಮ ಮತ್ತು ದಾವಾ ಜಮೀನು ದೂರ ಇದೆ. ನಾನು ಈ ಹಿಂದೆ KSRTC ಯಲ್ಲಿ ಡ್ರೈವರ್ ಆಗಿ  ನೌಕರಿ ಮಾಡಿ ನಿವೃತ್ತನಾಗಿದ್ದೇನೆ. ನಾನು ಈ ಹಿಂದೆ ಕುಸ್ತಿ ಪೈಲ್ವಾನ್ ಆಗಿದ್ದೆ.  ಕಲ್ಲಪ್ಪ ಮರಿಬಸಪ್ಪನವರು ಸಹ ಕುಸ್ತಿ ಆಡುತ್ತಾರೆ ಎಂದರೆ ನಿಜ. ಸಣ್ಣ ದಾಮಣ್ಣ ಮಡಿವಾಳರ  ಸಹ ಕುಸ್ತಿ ಆಡುತ್ತಾರೆ ಎಂದರೆ ನಿಜ. ನಾನು ಮತ್ತು 3 ನೇ ವಾದಿ ಸ್ನೇಹಿತರು ಎಂದರೆ ಸರಿಯಲ್ಲ. ದಾವಾ ಜಮೀನು 1 ಎಕರೆ 31 ಗುಂಟೆ  ಯನ್ನು ಅಶೋಕ ಡಂಬಳ ಕಬ್ಜಾ ವಹಿವಾಟು ಮಾಡುತ್ತಿದ್ದರು ಎಂದರೆ ಸರಿಯಲ್ಲ. ಅವರ ಹೊಲ ಬಿತ್ತಲು ಹೋದಾಗ ವಾದಿಯರು ನಿಲ್ಲಿಸಿದರು ಎಂದರೆ ನಿಜ.  ಕಲ್ಲಪ್ಪ ಮರಿಬಸಪ್ಪನವರು ಬಿತ್ತಿದ್ದನ್ನು  ಅಶೋಕ ಡಂಬಳ ಮುರಿದು ಬಿತ್ತಿದರು.  ಆ ಸಮಯದಲ್ಲಿ ನಾನು ಅಲ್ಲೇ ಇದ್ದೆ.  ಆ ಕ್ರಿಮಿನಲ್ ಕೇಸ್ ನಲ್ಲಿ ನಾನು ಸಾಕ್ಷಿ ಹೇಳಿಲ್ಲ. ದಾವಾ ಜಮೀನು 1 ಎಕರೆ 31 ಗುಂಟೆ  ಯನ್ನು ಅಶೋಕ ಡಂಬಳ ಹಿಡಿದುಕೊಂಡು ಅರ್ಧ ಹೊಲ ಬಿತ್ತಿದ್ದರು ಮತ್ತು ಇನ್ನು ಉಳಿದ ಅರ್ಧ ಹೊಲವನ್ನು ಬಿತ್ತಲು ಹೋಗಿದ್ದರು ಆ ಸಮಯದಲ್ಲಿ  ಕಲ್ಲಪ್ಪ ಮರಿಬಸಪ್ಪನವರು ಮತ್ತು ಅವರ ಕುಟುಂಬದವರು ಅವರಿಗೆ ಅಡ್ಡಿ ಪಡಿಸಿ ಹೊಡಿ ಬಡಿ ಮಾಡಿದರು ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನೇ ಕೊಟ್ಟಿದ್ದೇನೆ. ಕಲ್ಲಪ್ಪ ಮರಿಬಸಪ್ಪನವರು ನನ್ನ ಸ್ನೇಹಿತ ಆಗಿದ್ದರಿಂದ ಆತನ ಮಾತುಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಪ್ರಮಾಣ ಪತ್ರದಲ್ಲಿ ಕಾಣಿಸಿದ ಎಲ್ಲಾ ಸಂಗತಿಗಳು ಸುಳ್ಳು ಇವೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**(ಆದಿತ್ಯ ಆರ್ ಕಲಾಲ್ )**

ಹೆಚ್ಚುವರಿ  ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ
ನ್ಯಾಯಾಧೀಶರು ರೋಣ.